## ಎಕ್ಸ್‌ಪೈರಿ ದಿನಾಂಕ ಇದೆಯೆ?

ಆಯುರ್ವೇದ ಔಷಧಿಗಳಿಗೂ ಎಕ್ಸ್‌ಪೈರಿ ಇಲ್ಲ ಎನ್ನುವುದು ಮತ್ತೊಂದು ತಪ್ಪು ಗ್ರಹಿಕೆ ಪ್ರತಿಯೊಂದು ಔಷಧಿಗೂ ತನ್ನದೇ ಆದ ಕಾಲಮಿತಿ ಇರುತ್ತದೆ. ಕೆಲವು ಔಷಧಿಗಳನ್ನು ಹೊರತುಪಡಿಸಿದರೆ ಉಳಿದೆಲ್ಲ ಔಷಧಿಗಳಿಗೂ ಎಕ್ಸ್‌ಪೈರಿ ಇದ್ದೇ ಇದೆ.

ಚೂರ್ಣಗಳನ್ನು (ಪುಡಿ) ತಯಾರಿಸಿದ ಬಳಿಕ 2ರಿಂದ 3 ವರ್ಷದೊಳಗೆ ಬಳಸಬೇಕು. ಮಾತ್ರೆಗಳು (ಗುಟಿಕ) ಐದು ವರ್ಷದೊಳಗೆ ಮತ್ತು ಲೇಹ್ಯಗಳು ಮೂರು ವರ್ಷದ ಒಳಗೆ ಬಳಸಬೇಕು. ಘೃತಗಳು ಮೂರು ವರ್ಷದೊಳಗೆ, ಆದರೆ ಅಸವಾರಿಷ್ಟಗಳನ್ನು ಹತ್ತು ವರ್ಷಗಳವರೆಗೂ ಬಳಸಬಹುದು. ಈ ರೀತಿ ಆಯುರ್ವೇದದ ಔಷಧಿಗಳಿಗೆ ಕಾಲಮಿತಿಯ ಮಾಹಿತಿ ಸ್ಪಷ್ಟವಾಗಿದ್ದರೂ, ಔಷಧಿ ತಯಾರಿಸುವ ಕಂಪನಿಗಳು ಔಷಧಿಯ ಬಾಕ್ಸ್ ಮೇಲೆ 'ಎಕ್ಸ್‌ಪೈರಿ ದಿನಾಂಕ' ನಮೂದಿಸುವುದನ್ನು ಕಡ್ಡಾಯಗೊಳಿಸಿದೆ.

ಮೃತ ಇತ್ಯಾದಿ.

2. ವಿಷ್ಕಿರಾ (ಆಹಾರವನ್ನು ಪಡೆಯಲು ನೆಲವನ್ನು ಕೆರೆಯುವ ಪಕ್ಷಿಗಳು): ಕೌಜಗಹಕ್ಕಿ, ಕೋಳಿ, ಕಾಡುಕೋಳಿ, ತಿತ್ತಿರ ಪಕ್ಷಿ, ಬೇಟೆಹಕ್ಕಿ, ಸಾಕು ಹುಂಜ, ಕೊಕ್ಕರೆ, ಗುಬ್ಬಚ್ಚಿ, ಬಾತುಕೋಳಿ, ನವಿಲು ಇತ್ಯಾದಿ.

3. ವಿಲೇಶಯ (ನೆಲದಡಿ ಗೂಡುಕಟ್ಟಿ ವಾಸಿಸುವ ಜೀವಿಗಳು): ಕಪ್ಪೆ, ಹಾವು, ಹಲ್ಲಿ ಇತ್ಯಾದಿ.

4. ಪ್ರಸಹಾ (ಹಲ್ಲಿನಿಂದ ಆಹಾರವನ್ನು ಎತ್ತಿಕೊಳ್ಳುವ ಪ್ರಾಣಿಗಳು): ಹಸು, ಕತ್ತೆ, ಕುದುರೆ, ಸಿಂಹ, ಕರಡಿ, ಮಂಗ, ನರಿ, ನಾಯಿ, ಕಾಗೆ, ಹದ್ದು ಇತ್ಯಾದಿ.

5. ಪ್ರತೂಡ (ಆಹಾರವನ್ನು ಕುಟುಕುವ ಪಕ್ಷಿಗಳು): ಗಿಳಿ, ಮೈನಾ ಗ್ರೀಕ್, ಕೌಜಗಹಕ್ಕಿ, ಕೋಗಿಲೆ, ಕಂದು ಪಾರಿವಾಳ, ಮನೆಯ ಗುಬ್ಬಚ್ಚಿ ಇತ್ಯಾದಿ.

6. ಮಾಯಾಮೃಗ (ದೊಡ್ಡ ಗಾತ್ರದ ಪ್ರಾಣಿಗಳು) ಹಂದಿ, ಎಮ್ಮೆ, ಆನೆ, ಕಾಡೆಮ್ಮೆ, ಘೇಂಡಾಮೃಗ ಇತ್ಯಾದಿ.

7. ಮತ್ಸ್ಯ (ನೀರಿನಲ್ಲಿ ವಾಸಿಸುವ ಜೀವಿಗಳು): ಕೆಂಪು, ಮೀನು, ಆಮೆ, ತತ್ತಿ, ಬಸವನಹುಳು, ಬಗೆಬಗೆಯ ಮೀನುಗಳು, ತಿಮಿಂಗಿಲ ಇತ್ಯಾದಿ.

ಮೇಕೆ ಮತ್ತು ಕುರಿಗಳನ್ನು ಈ ಗುಂಪುಗಳಲ್ಲಿ ಸೇರಿಸಿಲ್ಲ. ಏಕೆಂದರೆ ಅವು ಮಿಶ್ರತಳಿಗಳು ಮತ್ತು ಎಲ್ಲೆಡೆ ಕಂಡುಬರುತ್ತವೆ.

ಮಾಂಸದ ಸಾಮಾನ್ಯ ಗುಣಗಳನ್ನು ಹೀಗೆ ವಿವರಿಸಲಾಗಿದೆ:

* ಆಗತಾನೇ ಕೊಂದ ವಯಸ್ಕ ಪ್ರಾಣಿಗಳ ಮಾಂಸ ಅತ್ಯುತ್ತಮ. ಸತ್ತ, ದಪ್ಪಗಿದ್ದ, ನೀರಿನಲ್ಲಿ ಮುಳುಗಿದ, ರೋಗಗ್ರಸ್ತ, ವಿಷ ಹಾಕಿದ ಹಾಗೂ ಸೊರಗಿದ ಪ್ರಾಣಿ– ಪಕ್ಷಿಗಳ ಮಾಂಸ ಸೇವನೆ ನಿಷಿದ್ಧ.

* ಗಂಡು ಪ್ರಾಣಿಗಳಲ್ಲಿ ಹೊಕ್ಕುಳ ಮೇಲಿನ, ಹೆಣ್ಣು ಪ್ರಾಣಿಗಳಲ್ಲಿ ಹಾಗೂ ಗರ್ಭಿಣಿ ಪ್ರಾಣಿಗಳಲ್ಲಿ ಹೊಕ್ಕುಳ ಕೆಳಗಿನ ಭಾಗಗಳನ್ನು ಸೇವಿಸಿದರೆ ಜೀರ್ಣವಾಗುವುದು ಕಷ್ಟ.

* ಚತುಷ್ಪಾದಿಗಳಲ್ಲಿ ಹೆಣ್ಣು ಪ್ರಾಣಿಗಳ ಮಾಂಸ ಬೇಗ ಜೀರ್ಣವಾಗುತ್ತದೆ. ಗಂಡು ಹಕ್ಕಿಗಳ ಮಾಂಸ ಸುಲಭವಾಗಿ ಅರಗುತ್ತದೆ.

### ಶಸ್ತ್ರಚಿಕಿತ್ಸೆ ಇದೆಯೆ?

ಆಯುರ್ವೇದದಲ್ಲಿ ಶಸ್ತ್ರಚಿಕಿತ್ಸೆ ಇಲ್ಲ ಎಂದು ಕೆಲವರು ತಪ್ಪು ತಿಳಿದುಕೊಂಡಿದ್ದಾರೆ. 'ಶಸ್ತ್ರಚಿಕಿತ್ಸಾ ಪಿತಾಮಹ'ನೆಂದು ವಿಶ್ವ ವೈದ್ಯರಂಗವೇ ಸುಶ್ರುತರನ್ನು ಒಕ್ಕೊರಲಿನಿಂದ ಒಪ್ಪಿರುವಾಗ ಆಯುರ್ವೇದದಲ್ಲಿ ಶಸ್ತ್ರಕ್ರಿಯೆಯಿಲ್ಲ ಎಂದರೆ ಹೇಗೆ? ಸುಶ್ರುತ ರಚಿಸಿರುವ 'ಸುಶ್ರುತ ಸಂಹಿತೆ'ಯು ಶಸ್ತ್ರಚಿಕಿತ್ಸೆಗೆ ಸಂಬಂಧಿಸಿದ ಪ್ರಥಮ ಗ್ರಂಥ. ವಿಶ್ವದೆಲ್ಲೆಡೆ ಬೆಳೆದಿರುವ, ಮೆಚ್ಚುಗೆಗೆ ಪಾತ್ರರಾಗಿರುವ ಸುರೂಪಿಕಾ ಶಸ್ತ್ರಚಿಕಿತ್ಸೆ (ಪ್ಲಾಸ್ಟಿಕ್ ಸರ್ಜರಿ) ಆಯುರ್ವೇದ ಅಪೂರ್ವ ಕೊಡುಗೆ. ಆಯುರ್ವೇದದ ಶಸ್ತ್ರಕ್ರಿಯೆ ಕ್ಷಾರಕರ್ಮ ಮೂಲವ್ಯಾಧಿಗೆ ಅತ್ಯುತ್ತಮ ಚಿಕಿತ್ಸೆ.

ಸುರೂಪಿಕ ಚಿಕಿತ್ಸೆ: ಸುಮಾರು 2500 ವರ್ಷಗಳಷ್ಟು ಹಿಂದೆಯೇ ಸುಂದರ ರೂಪಕ್ಕಾಗಿ ಶಸ್ತ್ರಚಿಕಿತ್ಸೆ ನಡೆಸುವ ಕ್ರಮ ಭಾರತದಲ್ಲಿತ್ತು. ಸುಮಾರು ಕ್ರಿ.ಪೂ. 600– 500ರಲ್ಲಿ ಸುಶ್ರುತ ಸರಿಪಡಿಸುವುದರಲ್ಲಿ ಸಿದ್ಧಹಸ್ತನಾಗಿದ್ದ. ಶಸ್ತ್ರಚಿಕಿತ್ಸಾ ವಿಧಾನಗಳು ಹೆಚ್ಚು ಮುಂದುವರಿಯದಿದ್ದ ಕಾಲದಲ್ಲಿ ಅವನು ನಡೆಸುತ್ತಿದ್ದ ನಾಸಿಕ ಸುರೂಪಿಕಾ ಶಸ್ತ್ರಚಿಕಿತ್ಸೆ (ರೈನೋಪ್ಲಾಸ್ಟಿ)ಯ ವಿಧಾನವನ್ನೇ ಆಧುನಿಕ ಸುರೂಪಿಕಾ ಶಸ್ತ್ರಚಿಕಿತ್ಸಕರು ಅನುಸರಿಸುತ್ತಿದ್ದಾರೆ.

ಬ್ರಿಟಿಷರೊಂದಿಗೆ ನಡೆದ ಯುದ್ಧದಲ್ಲಿ ಟಿಪ್ಪು ಸುಲ್ತಾನ್, ಬ್ರಿಟಿಷ್ ಸೈನಿಕನ ಮೂಗು ತುಂಡರಿಸಿದಾಗ ಯುದ್ಧಾನಂತರ ಭಾರತೀಯ ವೈದ್ಯನೊಬ್ಬ ಅವನನ್ನು ಪ್ಲಾಸ್ಟಿಕ್ ಸರ್ಜರಿಯ ಮೂಲಕ ಚಿಕಿತ್ಸೆ ನೀಡಿ ಸರಿಪಡಿಸಿದನಂತೆ. ಇದನ್ನು ಅರಿತ ಬ್ರಿಟಿಷರು ಇಲ್ಲಿನ ವೈದ್ಯರಿಂದ ಇಂಗ್ಲೆಂಡಿನ ವೈದ್ಯರಿಗೆ ತರಬೇತಿ

—48ನೇ ಪುಟ ನೋಡಿ



